ವಾದಿಗಳು ಒತ್ತುವರಿ ಮಾಡದ್ದಾರೆ ಎಂದು ಸುಳ್ಳು ಆರೋಪಣೆ ಮಾಡಿ ಅವರ ಸ್ವತ್ತಿನ ಕಂಪೌಂಡ್‌ನ್ನು ತೆಗೆಯುವ ಪ್ರಯತ್ನವನ್ನು ಮಾಡಿರುತ್ತೇನೆ ಎಂದರೆ ಸರಿಯಲ್ಲ.

**(ಈ ಹಂತದಲ್ಲಿ ವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಸಮಾಯಾವಕಾಶ ಕೋರಿದ್ದರಿಂದ ನೀಡಲಾಯಿತು.)**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

ಪ್ರಧಾನ ಸಿವಿಲ್ ಜಡ್ಜ, ಕುಮಟಾ

(ಇಂದು ದಿನಾಂಕ 12-01-2023 ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.)

**ಮುಂದುವರಿದ ಪಾಟೀ ಸವಾಲುಃ ವಾದಿ ಪರ ಶ್ರೀ ಎಂ.ಎನ್.ಎಸ್. ವಕೀಲರಿಂದಃ**

ದಾವಾ ಸ್ವತ್ತುಗಳು ವಾದಿಗಳಿಗೆ ವಾಂಟಣೆ ಮೂಲಕ ಬಂದಂತಹ ಸ್ವತ್ತು ಆಗಿರುತ್ತದೆ ಎಂದರೆ ಸರಿ. ದಾವಾ ಸ್ವತ್ತುಗಳಿಗೆ ಸಂಬಂಧಪಟ್ಟಂತೆ ವಾದಿಗಳನ್ನು ಹೊರತುಪಡಿಸಿ ಇತರರಿಗೆ ಯಾವುದೇ ಹಕ್ಕು ಇರುವುದಿಲ್ಲ ಎಂದರೆ ಸರಿ. ವಾದಿಗಳ ಹಕ್ಕಿನ ಸ್ಥಳದಲ್ಲಿ ನನಗೆ ಯಾವುದೇ ರೀತಿಯಾದ ಹಕ್ಕು ಇರುವುದಿಲ್ಲ ಎಂದರೆ ಸರಿ.

ಸ.ನಂ. 82/4 ರ ಸ್ವತ್ತು ನನ್ನ ತಾಯಿಯವರಿಗೆ ಭೂನ್ಯಾಯಮಂಡಳಿಯ ಮೂಲಕ ಮಂಜೂರಿ ಆಗಿದ್ದು, ಅವರ ಕಾಲಾನಂತರದಲ್ಲಿ ನಮಗೆ ಸೇರಿರುತ್ತದೆ. ಸ.ನಂ. 82/4 ರ ಪಹಣಿಪತ್ರಿಕೆಯಲ್ಲಿ ನನ್ನ ಹಾಗೂ ನನ್ನ ಸಹೋದರ - ಸಹೋದರಿಯರ ಹೆಸರುಗಳು ನಮೂದು ಇರುತ್ತವೆ. ನನಗೆ ಸೇರಿದ ಸ್ವತ್ತಿನ ಸುತ್ತ ಸರ್ವೆ ಗಡಿಕಲ್ಲು ಇರುವುದನ್ನು ನಾನು ಗಮನಿಸಿರುವುದಿಲ್ಲ. ನನ್ನ ಸ್ವತ್ತಿನ ನಾಲ್ಕೂ ದಿಕ್ಕುಗಳಲ್ಲಿ ಸರ್ವೆ ಗಡಿಕಲ್ಲು ಇದೆ ಎಂದರೆ ನಾನು ನೋಡಿರುವುದಿಲ್ಲ.

ನಮ್ಮ ಸ್ವತ್ತು ಹಾಗೂ ವಾದಿಗಳ ಸ್ವತ್ತು ಪೋಡಿ ಹಿಸ್ಸಾ ಆಗಿ ಪ್ರತ್ಯೇಕ ಸಂಖ್ಯೆ ನೀಡಲಾಗಿದೆ ಎಂದರೆ ಸರಿ. ನಾನು ಪಂಚಾಯತ್‌ಗಾಗಿ ನನ್ನ ಸ್ವತ್ತಿನ ಪೂರ್ವ ದಿಕ್ಕಿಗೆ 10 ಪೂಟ್ ಅಗಲದ ಸ್ಥಳವನ್ನು ರಸ್ತೆಗಾಗಿ ಬಿಟ್ಟುಕೊಟ್ಟಿದ್ದು, ಸದರಿ ರಸ್ತೆಯನ್ನು ನಕಾಶೆಯಲ್ಲಿ ಪ್ರತ್ಯೇಕವಾಗಿ ನಮೂದಿಸಲಾಗಿರುವುದಿಲ್ಲ. ನಾನು ರಸ್ತೆಗಾಗಿ ಬಿಟ್ಟಂತಹ ಸ್ಥಳವನ್ನು ಹೊರತುಪಡಿಸಿ ಸರ್ವೆ ಕಾರ್ಯ ಮಾಡಿಸುವ ಪ್ರಯತ್ನ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಾನು ರಸ್ತೆಗಾಗಿ ಬಿಟ್ಟಂತಹ ಸ್ಥಳವನ್ನು ಹೊರತುಪಡಿಸಿ ಸರ್ವೆ ಕಾರ್ಯನಡೆಸಿ ವಾದಿಗಳು ನನಗೆ ಸೇರಿದ ಸ್ವತ್ತನ್ನು ಒತ್ತುವರಿ ಮಾಡಿರುತ್ತಾರೆ ಎಂದು ನಕಾಶೆಯನ್ನು ಸೃಷ್ಟಿಸಿ ವಾದಿಗಳ ಸ್ಥಳವನ್ನು ಅತಿಕ್ರಮಿಸುವ ಪ್ರಯತ್ನ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಾನು ನನ್ನ ಜಾಗದ ಗಡಿ ಗುರುತಿಸುವಿಕೆಯ ಸಲುವಾಗಿ ಸರ್ವೆ ಮಾಡಿಸಲು ಅರ್ಜಿ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ಸರ್ವೆ ಕಾರ್ಯದ ಮೂಲಕ ವಾದಿಗಳ ಸ್ವತ್ತನ್ನು ಅತಿಕ್ರಮಿಸುವ ಉದ್ದೇಶದಿಂದ ನಾನು ಸರ್ವೆಗಾಗಿ ಅರ್ಜಿ ನೀಡಿರುತ್ತೇನೆ ಎಂದರೆ ಸರಿಯಲ್ಲ. ನಾವು ವಾದಿಗಳ ಸ್ವಾಧೀನಾನುಭವಕ್ಕೆ ತೊಂದರೆ ನೀಡುವ ಪ್ರಯತ್ನ ಮಾಡಿದ ಕಾರಣದಿಂದಲೇ ವಾದಿಗಳು ಪ್ರಸ್ತುತ ದಾವೆಯನ್ನು ಸಲ್ಲಿಸಿರುತ್ತಾರೆ ಎಂದರೆ ಸರಿಯಲ್ಲ.

ವಾದಿಗಳು ನಮ್ಮ ವಹಿವಾಟಿ ಸ್ವತ್ತಿನ ಸ್ವಾಧೀನಾನುಭವಕ್ಕೆ ಯಾವುದೇ ರೀತಿಯಲ್ಲಿಯೂ ಅಡ್ಡಿಪಡಿಸಿರುವುದಿಲ್ಲ ಎಂದರೆ ಸಾಕ್ಷಿಯು ನಮ್ಮ ವಹಿವಾಟಿಗೆ ವಾದಿಗಳು ಅಡ್ಡಿಪಡಿಸಿರುವುದಿಲ್ಲ, ವಾದಿಗಳ ಸ್ವತ್ತಿನ ವಹಿವಾಟಿಗೆ ನಾವು ಅಡ್ಡಿಪಡಿಸಿರುವುದಿಲ್ಲ ಎಂದು ನುಡಿಯುತ್ತಾರೆ. ನಮ್ಮ ಹಾಗೂ ವಾದಿಗಳ ಸ್ವತ್ತುವಿನ ನಡುವೆ ಅನಾದಿ ಕಾಲದಿಂದ ಇರುವಂತಹ ಗಡಿ ಪಾಗಾರವನ್ನು ನಾಶಗೊಳಿಸುವ ಹುನ್ನಾರ ನಡೆಸಿರುತ್ತೇವೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣಾ ಪ್ರಮಾಣಪತ್ರದ 2 ನೇ ಕಂಡಿಕೆಯಲ್ಲಿ ವಾದಿಗಳ ಸಹೋದರಿಯರಿಗೆ ಹಕ್ಕು ಇರುವ ಬಗ್ಗೆ ಹಾಗೂ ಅದನ್ನು ತಪ್ಪಿಸುವ ಸಲುವಾಗಿ ನಮ್ಮಗಳ ವಿರುದ್ಧ ಸುಳ್ಳು ದಾವೆ ಸಲ್ಲಿಸಿರುವುದಾಗಿ ನಮೂದಿಸಲಾಗಿದ್ದು, ಸದರಿ ಅಂಶವನ್ನು ನನ್ನ ವಕೀಲರಿಗೆ ನಾನು ತಿಳಿಸಿರುವುದಿಲ್ಲ. ನಾವು ಅನಾವಶ್ಯಕವಾಗಿ ಗಡಿಯ ವಿಚಾರಕ್ಕೆ ಸಂಬಂಧಪಟ್ಟಂತೆ ತಕರಾರು ಮಾಡಿದ

ಕಾರಣ ವಾದಿಗಳು ಪ್ರಸ್ತುತ ದಾವೆಯನ್ನು ಹೂಡಬೇಕಾಗಿರುತ್ತದೆ ಎಂದರೆ ಸರಿಯಲ್ಲ. ಆದಕಾರಣ ವಾದಿಗಳು ದಾವೆಯಲ್ಲಿ ಕೇಳಿದ ಪರಿಹಾರಗಳನ್ನು ಪಡೆಯಲು ಅರ್ಹರಿದ್ದಾರೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣಾ ಪ್ರಮಾಣಪತ್ರದಲ್ಲಿ ಸುಳ್ಳು ಅಂಶಗಳನ್ನು ಬರೆದು, ಅದಕ್ಕೆ ಪೂರಕವಾಗುವ ರೀತಿಯಲ್ಲಿ ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ – ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

ಪ್ರಧಾನ ಸಿವಿಲ್ ಜಡ್ಜ, ಕುಮಟಾ